


ಬೇಲಿಕಟ್ಟಿ ಮುಳ್ಳು ಬಡಿದರೂ ಬೆಳೆ ಹಾನಿ ತಡೆಯಲಾಗಲಿಲ್ಲ. ಗದ್ದೆ ಬಯಲಿನ ಗೇಯ್ಮೆಯ ಒಕ್ಕಲ ಮಕ್ಕಳಿಗೆ ಮರಳಿನ ಕಂಟ ಕಟ್ಟುವ ವಿದ್ಯೆ ಕರಗತ. ಗದ್ದೆಯ ಜೇಡಿ ಮಿಶ್ರಿತ ಮರಳು ಮಣ್ಣನ್ನು ಸಲಕೆಯಿಂದ ಅಗೆಯುತ್ತ ಹದ ಮಣ್ಣನ್ನು ತೆಳ್ಳನೆಯ ಗೋಡೆಯಂತೆ ಎಬ್ಬಿಸಿ ಐದಡಿ ಎತ್ತರ ನಿಲ್ಲಿಸಿದರು. ಬೇಸಿಗೆಯ ನಾಲ್ಕಾರು ತಿಂಗಳ ಬೆಳೆ ರಕ್ಷಣೆಗೆ ತಾತ್ಕಾಲಿಕ ಕೋಟೆಯಿದು. ಮಣ್ಣಿನಲ್ಲಿ ಗೆಲ್ಲುವ ಈ ತಂತ್ರ ತೋರಿಸಿದವರು ಶಾಲೆ ಓದದ ಹಾಲಕ್ಕಿ, ಮುಕ್ರಿ ಜನಾಂಗದವರು.

ಬಯಲು ಬಳಸಿದ ಬಡಗಣಿಯ ಜಲದುರ್ಗದ ಪಕ್ಕದಲ್ಲಿ ಕೃಷಿಕರದು ಮರಳ ದುರ್ಗದ ವಿಚಿತ್ರ ಸಾಮ್ರಾಜ್ಯ! ಹಸಿದ ದನಕರು ಶೇಂಗಾ ಸಸಿ ಮೇಯಲು ಗದ್ದೆಗೆ ಇಳಿದರೆ ಕಾಣುವುದು ಮರಳಿನ ಗೋಡೆ, ಅದರ ಮೇಲೆ ಗದ್ದೆಯ ಕಳೆಗಿಡ ಕೊಳ್ಳಮುಳ್ಳಿನ ನಾಟಿ. ಗೋಡೆಯ ತುದಿಯಲ್ಲಿ ಇಣುಕಿದ ದನಕರುವಿಗೆ ಕೊಳಮುಳ್ಳಿನ ಸೂಜಿ ಚಿಕಿತ್ಸೆ. ಕಾಡಿಗೆ ಹೋಗಿ ಬೇಲಿ ಗೂಟ ಕಡಿದು ತರುವ ತಾಪತ್ರಯವಿಲ್ಲ. ತಮ್ಮದೇ ಗದ್ದೆಯ ಮರಳು ಮಣ್ಣನ್ನು ತಾತ್ಕಾಲಿಕ ಗೋಡೆಯಾಗಿಸಿ ಬೆಳೆ ರಕ್ಷಿಸುವ ಅದ್ಭುತ ಕಲಾಗಾರಿಕೆ. ಬೆಳೆ ರಕ್ಷಿಸಿದ ಗೋಡೆ ಮೊದಲ ಮಳೆ ಸುರಿದಾಗ ಒದ್ದೆಯಾಗಿ ನೆಲಸಮವಾಗುತ್ತಿತ್ತು. ಅಷ್ಟರಲ್ಲಿ ಶೇಂಗಾ ಬೆಳೆ ಮನೆ ತಲುಪಿರುತ್ತಿತ್ತು.

## ಹಳ್ಳಿ ಮುರಿದು ಕಟ್ಟಿದ ಅಭಿವೃದ್ಧಿ

'ಸುಧಾ' ಪತ್ರಿಕೆಯ ಹಳೆಯ ಓದುಗರಿಗೆ ಬಡಗಣಿಯ ಮನ್ನಾ ಗೌಡ (14 ಏಪ್ರಿಲ್ 1996, 'ಮರುಳು ಮಾಡುವ ಮರಳ ಬೇಲಿ') ಲೇಖನ ನೆನಪಿದ್ದರೂ ಇರಬಹುದು. ಪ್ರತಿ ವರ್ಷ 500 ಅಡಿ ಉದ್ದದ ಕಂಟ ಕಟ್ಟುತ್ತ ಸುಮಾರು 60 ವರ್ಷ ಪರ್ಯಂತ ಬೇಸಿಗೆ ಬೆಳೆ ರಕ್ಷಣೆಗೆ ದುಡಿದವರು. ಬೇಲಿ ಗೂಟಕ್ಕೆ ಕಾಡಿಗೆ ನುಗ್ಗುವ ಕಾಲದಲ್ಲಿ ಮರಳು ಕಂಟದಿಂದ ಮನ್ನಾ ಉಳಿಸಿದ ಕಾಡಿನ ಲೆಕ್ಕ ಇಟ್ಟವರಾರು? ಈಗ ಕಾಲ ಬದಲಾಗಿ ಬಡಗಣಿ ನದಿ ತೀರದ ಹೊಳೆಗದ್ದೆ, ಸುವರ್ಣಗದ್ದೆಯಲ್ಲಿ ಎಲ್ಲೂ ಮರಳಿನ ಕಂಟ ಕಾಣಿಸುವುದಿಲ್ಲ. ಹುಚ್ಚುಕೋಡಿ ಬಡಗಣಿಯೂ ಮಳೆಗಾಲದಲ್ಲಿ ಮುಂಚಿನಂತೆ ಆಚೀಚೆ ಕೊಚ್ಚಿ ಹರಿಯದಂತೆ ಇಕ್ಕೆಲ್ಲಗಳಲ್ಲಿ ಕಲ್ಲಿನ ತಡೆಗೋಡೆ ಕಟ್ಟಲ್ಪಟ್ಟಿದೆ. ಭತ್ತ ಬೆಳೆಯುತ್ತಿದ್ದ ಹೊಳೆಗದ್ದೆ, ಸುವರ್ಣಗದ್ದೆ ಬಯಲಿನ ಕೃಷಿಕ ತಲೆಮಾರು ಬದಲಾಗಿದೆ, 20 ನೇಗಿಲಿದ್ದವರು ಶ್ರೀಮಂತರಾಗಿದ್ದ ಕಾಲ ಮರೆತು ಹೆದ್ದಾರಿ ಪಕ್ಕ ಭೂಮಿ ಇದ್ದವರು ಬಲಾಢ್ಯರಾಗಿದ್ದಾರೆ. ಕರಾವಳಿ ಸಂಪರ್ಕ ಸೇತು ಕೊಂಕಣ ರೈಲು ಬಂದು ಎರಡು ದಶಕವಾಯ್ತು, ಈಗ ರಾಷ್ಟ್ರೀಯ ಹೆದ್ದಾರಿಯೂ ಚತುಷ್ಪಥವಾಗಿದೆ. ಅಭಿವೃದ್ಧಿಯ ಉತ್ತುಂಗದಲ್ಲಿ ಓಡುವವರಿಗೆ ಧಾರಾಳ ಅವಕಾಶವಿದೆ. ಗದ್ದೆ, ಮನೆ, ಗುಡ್ಡಗಳನ್ನು ನುಂಗಿ ಅಭಿವೃದ್ಧಿ ನಗುತ್ತಿದೆ. ಸುವರ್ಣಗದ್ದೆ, ಹೊಳೆಗದ್ದೆ ಬಯಲಿಗೆಲ್ಲ ಕೆಂಪುಮಣ್ಣು ಬಿದ್ದು ಗುರುತು ಸಿಗದಷ್ಟು

